### ‘ಮೈಸೂರು ಸಾಂಬಾರ’ ಹೆಸರೂ ಇದೆ

‘ಮನೆಯ ಹಿತ್ತಿಲಲ್ಲಿರಲಿ ಕಾಡು ಕೊತ್ತಂಬರಿ’ (ಏ. 10, ಸಿದ್ದರಾಜು, ಕೊತ್ತತ್ತಿ) ಮಾಹಿತಿಯುಳ್ಳ ಲೇಖನ. ಮಲೆನಾಡಿನಲ್ಲಿ ಯಾವುದೇ ಆರೈಕೆ ಬೇಡದೆ ಬೆಳೆಯುವ ಈ ಸಸ್ಯಕ್ಕೆ ‘ಮೈಸೂರು ಸಾಂಬಾರ’ ಎಂದು ಕರೆಯುತ್ತಾರೆ. ಸ್ವಲ್ಪ ಮಳೆ ಹೆಚ್ಚಾದರೆ ಕೊತ್ತಂಬರಿ ಸೊಪ್ಪು ಹಾಳಾಗುತ್ತೆ. ಆದರೆ ಈ ಸಸ್ಯ ಬಹಳ ಗಟ್ಟಿ. ಎಷ್ಟೇ ಮಳೆ ಹುಯ್ದರೂ ಚಿಗುರುತ್ತಲೇ ಇರುತ್ತೆ. ಚಟ್ನಿ, ತಂಬುಳಿ, ಪಲಾವ್ ಇತ್ಯಾದಿ ಖಾದ್ಯಗಳಿಗೆ ಸೂಕ್ತ, ಕಡಿಮೆ ದರದ ಪರ್ಯಾಯ. ಅಪಾರ್ಟ್ಮೆಂಟ್ ಬಾಲ್ಕನಿಯಲ್ಲೂ ಬೆಳೆಯಬಹುದು.

—ರಾಜೀವ್ ಎನ್. ಮಾಗಲ್, ಹಾಸನ

### 30 ವರ್ಷದ ಬಳಕೆ

ಕಾಡು ಕೊತ್ತಂಬರಿ ಗಿಡ ನಮ್ಮ ಮನೆಯ ಟೆರೇಸ್ ಗಾರ್ಡನ್‌ನಲ್ಲಿದೆ. ಊಟಿಯಿಂದ ತಂದು ಬೆಳೆಸಿದೆವು. 30 ವರ್ಷದಿಂದ ಅಡುಗೆಗೆ ಉಪಯೋಗಿಸುತ್ತಲೇ ಬಂದಿದ್ದೇವೆ. ಮಾಮೂಲಿ ಕೊತ್ತಂಬರಿಯೆಂತೆಯೇ ಸುವಾಸನೆಭರಿತ.

—ಸಿ. ಸರಳಾಮಣಿ, ಮೈಸೂರು

### ಕುನಾಲ್ ನಿದರ್ಶನ

‘ವಿನೋದ ಮಾತಿನ ವಿವಾದ ಪುರುಷ (ಏ. 10, ಪ್ರವೀಣ ಕುಲಕರ್ಣಿ) ಅರ್ಥವತ್ತಾಗಿದೆ. ಸರ್ವಾಧಿಕಾರಿ ಮನೋಭಾವದವರು ಟೀಕಿಸುವವರನ್ನು ಸಹಿಸುವುದಿಲ್ಲ. ಅಧಿಕಾರಸ್ಥರ ಮುಖಕ್ಕೆ ಹೊಡೆದಂತೆ ಸತ್ಯವನ್ನು ಹಾಸ್ಯದ ಮೂಲಕ ಹೇಳುವ ವ್ಯಕ್ತಿಗಳು ಸಮಾಜಕ್ಕೆ ಬೇಕು. ಯಾವುದೇ ವ್ಯಕ್ತಿ ನೈತಿಕವಾಗಿ ಗಟ್ಟಿ ಇದ್ದರೆ ಯಾರಿಂದಲೂ ಏನೂ ಮಾಡಲು ಸಾಧ್ಯವಾಗುವುದಿಲ್ಲ ಎನ್ನುವುದಕ್ಕೆ ಕುನಾಲ್ ಕಾಮ್ರಾ ಉದಾಹರಣೆ.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

### ಸುಂದರ ಕವಿತೆ

‘ಸುಧಾ’ ಯುಗಾದಿ ವಿಶೇಷಾಂಕ 2025ರಲ್ಲಿ ಪ್ರಕಟವಾಗಿರುವ ತೇರಳಿ ಎನ್. ಶೇಖರ್ ಅವರ ಕವಿತೆ ತುಂಬಾ ಚೆನ್ನಾಗಿದೆ.

—ಶ್ರೀಧರ ಪಿಸ್ಸೆ

### ಕೊನೆ ಏನಿತ್ತು?

ಎಂ.ಎಸ್. ಶ್ರೀರಾಮ್ ಅವರ ‘ಲವ್’ ಕಥೆ, ರಾಜೇಶ್ವರ್ ‘ನಿಜ ಹೇಳುತ್ತೇನೆ’ ಎಂಬ ಸಾಲಿನಲ್ಲಿ ಕೊನೆಯಾಗಿದೆ. ಅವನು ಪೂರ್ತಿ ಸತ್ಯ ಹೇಳಿ ಸಿಕ್ಕಿ ಹಾಕಿಕೊಂಡನೇ? ಅರ್ಧ ಸತ್ಯ ಹೇಳಿದ್ದು ಪೊಲೀಸರು ನಂಬಿದರೆ? ಹೀಗೆ ಹತ್ತು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಕಥೆಗಾರನ ಕಲ್ಪನೆಯಲ್ಲಿ ಕಥೆಯ ಕೊನೆ ಏನಿತ್ತು?

—ರಂಜಿತಾ ಮಹಾಜನ, ಬೆಳಗಾವಿ




### ಮನಸ್ಸಿಗೆ ಟಾನಿಕ್

‘ವಿಮೆನ್ ಓನ್ಲಿ’ (ಏ. 10, ಧಾರಿಣಿ ಮಾಯಾ) ಅಗತ್ಯವಿದ್ದ ಲೇಖನ. ಕುಟುಂಬಕ್ಕೆ ದುಡಿಯುತ್ತಾ ಹೈರಾಣಾಗುವ ಮಹಿಳೆಯರಿಗೆ ಈ ರೀತಿಯ ರಿಟ್ರೀಟ್‌ಗಳು ಅವಶ್ಯಕವೂ ಹೌದು. ಬದುಕು ಬೇಸರ ಎನ್ನಿಸಿದಾಗ, ಯಾಂತ್ರಿಕ ಜೀವನದಿಂದ ಒತ್ತಡ ಆವರಿಸಿದಾಗ ಸಣ್ಣ ಪ್ರವಾಸವೋ, ಸ್ನೇಹಿತರೊಂದಿಗೆ ಹರಟೆಯೋ, ಹೊಸತರ ಕಲಿಕೆಯೋ, ಹೊಸಬರೊಂದಿಗೆ ಒಡನಾಟವೋ ಮನಕ್ಕೆ ಟಾನಿಕ್ ಆಗಬಹುದು. ಇದು ಆತ್ಮವಿಶ್ವಾಸ ತುಂಬುವ ದಾರಿಯೂ ಹೌದು.

—ಚೈತನ್ಯ ಎಂ., ಮೈಸೂರು

### ಪರಿಸರಪ್ರೀತಿಗೆ ಶರಣು

‘ನಮ್ಮದೇ ಕಥೆ– ವ್ಯಥೆಯನ್ನು ಮಕ್ಕಳ ಮನಸಿಗೆ ದಾಟಿಸುತ್ತ...’ (ಏ. 10, ಸಂಧ್ಯಾ ಹೆಗಡೆ) ಬರಹದಲ್ಲಿ, ಜಯಪ್ರಕಾಶ್ ಎಕ್ಕೂರ್‌ರವರ ಪರಿಸರಪ್ರೀತಿ ಕುರಿತು ಓದಿ ಸಂತಸವಾಯಿತು. ಹಣ್ಣು ಮಾರುವ ಅಜ್ಜಿಯೊಂದಿಗೆ ಪ್ರಾರಂಭವಾಗುವ ಕಥೆ, ಗಿಡ ಮರಗಳೆಲ್ಲ ಕರಗಿ ಬೆಟ್ಟ ಬೋಳಾಗುವುದರೊಂದಿಗೆ ಮುಕ್ತಾಯವಾದಾಗ ನನ್ನಲ್ಲೂ ಗಾಢ ಮೌನ ಆವರಿಸಿತು. ಜನ್ಮದಿನಕ್ಕಾಗಿ ಕಟ್ ಮಾಡುವ ಬದಲಿಗೆ ಒಟ್ಟು ಮಾಡುವ ಕೆಲಸ ನಮ್ಮದಾಗಬೇಕು ಎನ್ನುವ ಅವರ ಮಾತು ಹೃದಯಕ್ಕೆ ನಾಟಿತು. ಜಯಪ್ರಕಾಶ್‌ರವರೇ ನೀವು ಬಟ್ಟೆಗಳನ್ನು ಮಾತ್ರ ಇಸ್ತ್ರಿ ಮಾಡ್ತಾ ಇಲ್ಲ, ಮನಸ್ಸುಗಳನ್ನೂ...

—ಅನ್ನಪೂರ್ಣಮ್ಮ, ಬೆಂಗಳೂರು



### ಶ್ಲಾಘನೀಯ ಪ್ರಯತ್ನ

ವೃತ್ತಿ, ಪ್ರವೃತ್ತಿ ಎರಡನ್ನೂ ಸರಿದೂಗಿಸಿಕೊಂಡು ಎಳೆಮಕ್ಕಳ ಮನಮುಟ್ಟುವಂತೆ ಪರಿಸರ ಕಥೆ ಹೇಳುವ ಜಯಪ್ರಕಾಶ ಎಕ್ಕೂರರ ಬಗ್ಗೆ ಗೌರವ ಮೂಡಿತು. ಈ ಅರಿವನ್ನು ಮಕ್ಕಳಲ್ಲಿ ಮೂಡಿಸುವ ಪ್ರಯತ್ನ ಶ್ಲಾಘನೀಯ.

—ಎಸ್. ವಿಶ್ವನಾಥ ಐನಹಳ್ಳಿ, ಮೈಸೂರು

### ಯಾರಿಗೆ ಪಾಠ?

‘ಜೀವನಸಂಜೆಯಲ್ಲಿ ಅಸಹಾಯಕತೆಯ ಬಿಂಬಗಳು; ನೆನಪಾಗಬೇಕಿದೆ ಮಾನವೀಯತೆಯ ಪಾಠಗಳು’ (ಏ. 03, ರಘುನಾಥ ಚ.ಹ.) ‘ನಿಮ್ಮೊಡನೆ’ ಮನಮುಟ್ಟಿತು. ಆದರೆ ಮಾನವೀಯತೆಯ ಪಾಠ ಮಾಡುವುದು ಯಾರಿಗೆ? ಎಷ್ಟೇ ಕೆದಕಿದರೂ ಉತ್ತರ ಇಲ್ಲದ ಪ್ರಶ್ನೆಗಳಾಗಿ ಕಾಡುತ್ತಿರುವ ಜ್ವಲಂತ ಸಮಸ್ಯೆ ಹಿರಿಯರ ಸಾಂಗತ್ಯದ ಕೊರತೆ. ಪುಟ್ಟ ಮಕ್ಕಳಿಗೆ ಬೆಳಗಿನಿಂದ ಸಂಜೆವರೆಗೂ ಪಾಠ, ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುವಾಗ ಅಜ್ಜ ಅಜ್ಜಿಯರ ಜೊತೆ ಆಟವಾಡಲು ಸಮಯವೆಲ್ಲಿ? ದೊಡ್ಡವರಿಗೆ ವೃತ್ತಿಯನ್ನು ನಿಭಾಯಿಸುವ ಒತ್ತಡದ ಮಧ್ಯೆ ಹೆತ್ತವರಿಗೆ ಸಮಯ ಕೊಡಲಾಗದ ಅಸಹಾಯಕತೆ. ಒಂಟಿತನದಿಂದ ಹಿರಿಯರು ತಾವಾಗೇ ವೃದ್ಧಾಶ್ರಮ ಸೇರಿಕೊಳ್ಳಲು ಬಯಸಿದರೆ ಆಶ್ಚರ್ಯವೇನಿಲ್ಲ. ಜೀವನಕ್ರಮವೇ ಬದಲಾದ ಈ ಕಾಲಘಟ್ಟದಲ್ಲಿ ಹಿರಿಯರು ಮಕ್ಕಳಿಗೆ ಹೊರೆಯಾಗಿರುವಾಗ ಸರ್ಕಾರ ಅದಕ್ಕೂ ಕಾನೂನು ಮಾಡಬೇಕಾದ ಸಂದರ್ಭ ಬಂದಿರುವುದು ವಿಪರ್ಯಾಸವೇ ಸರಿ.

—ಶಕುಂತಲ ರೆಡ್ಡಿ, ಬಳ್ಳಾರಿ


### ಈಗಲೂ ಮರುಸ್ಥಾಪಿತವಾಗಿಲ್ಲ

ಹಿರಿಯ ನಾಗರಿಕರ ಬಗೆಗಿನ ಕಾಳಜಿ ಸ್ವಾಗತಾರ್ಹ. ಆದರೆ ಈಗಲೂ ಹಿರಿಯ ನಾಗರಿಕರಿಗೆ ರೈಲು ಪ್ರಯಾಣದ ರಿಯಾಯಿತಿ ಮರುಸ್ಥಾಪನೆ ಆಗಿಲ್ಲ. ಸ್ಥಳ ಕಾಯ್ದಿರಿಸುವಾಗ ‘ಹಿರಿಯ ನಾಗರಿಕರಿಗೆ ರಿಯಾಯಿತಿ ಇಲ್ಲ’ ಎಂಬ ಮಾಹಿತಿಗೆ ‘ಓಕೆ’ ಒತ್ತಿದರಷ್ಟೇ ಬುಕಿಂಗ್ ಸಾಧ್ಯ. ನಾನೂ ಹಿರಿಯ ನಾಗರಿಕನಾಗಿದ್ದು, ರೈಲಿನಲ್ಲಿ ಪ್ರಯಾಣಿಸುವ ನನ್ನ ಅನುಭವ ಇದಾಗಿದೆ.

—ಡಾ. ಜಿ.ಟಿ. ಗೋವಿಂದಪ್ಪ, ದಾವಣಗೆರೆ

### ಸಿಂಹಾವಲೋಕನ!

‘ಓಟ ಓಟ ಹಿಂದೋಟ’ (ಏ. 10, ಪ್ರಭಾಮಣಿ ನಾಗರಾಜ)
ಓಟವೋ, ಬದುಕಿನ
ನಾಗಾಲೋಟವೋ?
ಹಿಂದೋಟವೋ, ಹಿನ್ನೋಟವೋ,
ಆಗಾಗ ಮಾಡುವ ಸಿಂಹಾವಲೋಕನವೋ?
ಒಟ್ಟಿನಲ್ಲಿ ಮನಸ್ಸು ನಮ್ಮ ಬಾಲ್ಯದ
ದಿನಗಳ, ಹಾಸ್ಯದ, ಪೇಚಿನ ಪ್ರಸಂಗಗಳ
ಮೆಲುಕು ಹಾಕಿದ್ದಂತೂ ನಿಜ.



—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in